ಅಪ್ಪ ಟವಲಿನಿಂದ ಕತ್ತಿನ ಹಿಂಭಾಗವನ್ನು ಒತ್ತಿ ಒರೆಸಿಕೊಳ್ಳುತ್ತ ಹೊಸಿಲಿಗೆ ಹೋಗಿ, "ಯಾರಪ್ಪಾ ನೀನು? ಏನು ಬೇಕು?" ಎಂದು ಕೇಳಿದರು. ಅಪ್ಪ ಕೇಳುವುದಕ್ಕೆ ಮೊದಲೇ ಅವರು "ಅಡ್ಡ ಬಿದ್ದೆ ಬುದ್ಧಿ" ಎಂದು ಕೈಮುಗಿದು ನಮಸ್ಕಾರ ಮಾಡಿದರು.

"ಸರಿ, ಸರಿ, ಯಾರು ನೀನು? ಏನು ಬೇಕು" ಎಂದು ಅಪ್ಪ ಮತ್ತೆ ಕೇಳಿದರು.

"ನಾನು ಕಲ್ಲಿನ ತೊಟ್ಟಿ ಮಾಡೋನು ಸ್ವಾಮಿ. ಒಂದು ಸಲ ಮಾಡಿಟ್ಟರೆ ಸಾಕು, ಬಹಳ ಕಾಲ ಒಳ್ಳೇ ಬಾಳಿಕೆ ಬರುತ್ತೆ. ಹಲವು ದೊಡ್ಡ ದೊಡ್ಡಿಗಳಿಗೆ ನಾನೇ ಮಾಡಿ ಕೊಟ್ಟಿದ್ದೀನಿ. ನೀವು ಸರೀಂತ ಹೇಳಿದ್ರೆ ನಿಮಗೂ ಎರಡೋ ಮೂರೋ ಮಾಡಿಕೊಡ್ತೀನಿ..." ಎಂದು ಗೋಗರೆಯುವ ದನಿಯಲ್ಲಿ ಅವರು ಹೇಳಿದರು.

"ಇದು ಏನು ದೊಡ್ಡ ದೊಡ್ಡಿನೇ? ಕೇವಲ ಹತ್ತು ಹಸುಗಳು, ನಾಲ್ಕು ಎಮ್ಮೆಗಳು ಅಷ್ಟೇ. ಎರಡು ಮೂರು ರೂಪಾಯಿಗೆಲ್ಲಾ ಮಣ್ಣಿನ ತೊಟ್ಟಿ ಸಿಗೋ ಈ ಕಾಲದಲ್ಲಿ ಕಲ್ಲಿನ ತೊಟ್ಟಿಗೆ ಯಾರು ಖರ್ಚು ಮಾಡ್ತಾರೆ?"

"ದೊಡ್ಡ ಬುದ್ಧಿಯವರ ಬಾಯಿಂದ ಅಂಥಾ ಮಾತು ಬರಬಾರದು. ಎಲ್ರೂ ಹಾಗೆ ಇದ್ಬಿಟ್ರೇ ನಮ್ಮಂಥ ಕಸುಬಿನವರು ಹೇಗೆ ಸ್ವಾಮಿ ಬದುಕೋದು?"

"ಅದು ಸರಿ, ಏನು ನನ್ನನ್ನು ನಂಬಿನೇ ಎಲ್ರೂ ಹುಟ್ಟಿದ್ದಾರಾ?"

"ಪಂಚೆ ಹರಿದ್ರೆ ಪಂಚೆ ಬದಲಾಯಿಸ್ತೀವಿ. ಅಂಗಿ ಹರಿದ್ರೆ ಅಂಗಿ ಬದಲಾಯಿಸ್ತೀವಿ. ದನಕರುಗಳು ಇರೋ ಜಾಗದಲ್ಲಿ ತೊಟ್ಟೀನೂ ಹಂಗೇ ಅಲ್ವೇ ಸ್ವಾಮಿ. ಕಾಲು ತಾಗುತ್ತೆ. ಕೈ ತಾಗುತ್ತೆ. ಮಣ್ಣಿನ ತೊಟ್ಟಿ ಆದ್ರೆ ಬದ್ಲಾಯಿಸ್ತಾನೆ ಇರ್ಬೇಕು. ಕಲ್ಲಿನ ತೊಟ್ಟಿಯಾದ್ರೆ ಚಿಂತೆ ಇಲ್ಲ ನೋಡಿ. ಬಹಳ ಕಾಲ ಹಾಗೆ ಇರುತ್ತೆ..."

"ಅದಕ್ಕೆ ತಕ್ಕ ಖರ್ಚು ಆಗ್ತದೆ ಅಲ್ವಾ?"

"ಇದೇ ಕಣೋ ಕಲ್ಲು ಅಂತ ಕೈತೋರಿಸಿ ಬಿಡಿ ಸ್ವಾಮಿ. ಅಷ್ಟು ಸಾಕು. ಖರ್ಚು ಏನು ಮಹಾ? ಮಾಡಿ ಕೊಡೋದು ನನ್ನ ಕೆಲಸ. ಮೂರೋ ನಾಲ್ಕೋ ದಿನ ದನದ ಕೊಟ್ಟಿಗೆಯಲ್ಲಿದ್ದು ಕೆಲಸ ಮುಗಿಸ್ತೀನಿ. ಹೊಟ್ಟೆ ಹಸಿದಾಗ ಕೂಳೋ ಗಂಜಿನೋ ಕೊಡಿ. ಮುಗಿಸಿ ಹೋಗೋವಾಗ ಅಡಿಕೆವೀಳ್ಯದ ಖರ್ಚಿಗೆ ನೀವೇ ನೋಡಿ 'ತಗೊಳೋ' ಅಂತ ಏನಾದ್ರೂ ಕೊಟ್ರೆ ಸಾಕು ಸ್ವಾಮಿ."

ಅಪ್ಪ ಮಾತನಾಡದೇ ಸ್ವಲ್ಪ ಸಮಯ ಸೂರಿನ ತಳಭಾಗವನ್ನು ನೋಡಿದರು. ಸಿಪಾಯಿ ತಾತ ಬಂದು ಒಂದು ರೂಪಾಯಿ ಕೊಟ್ಟು ನಾಲ್ಕು ಸೇರು ಹಾಲು ತೆಗೆದುಕೊಂಡು ಹೋದರು. "ಇದೇ ಕಣೋ ಕೊನೆ ಬಕೆಟ್ಟು. ಎಲ್ಲಾ ಕರಗಳನ್ನು ಬಿಚ್ಚಿ ಬಿಟ್ಟಾಯ್ತು. ಇನ್ನು ಹಾಲಿಲ್ಲ" ಎಂದು ಹೇಳುತ್ತ ಬಂದ ಚಿಕ್ಕ ಅತ್ತೆ ಅಂಡೆಯೊಳಗೆ ಹಾಲು ಸುರಿದಳು. ಹಿಂತಿರುಗುವಾಗ "ಯಾರೋ ಅದು?" ಎಂದು ಕಣ್ಣಲ್ಲೇ ನನ್ನನ್ನು ಕೇಳಿದಳು. ನನಗೆ ಏನೂ ಗೊತ್ತಿಲ್ಲ ಎಂಬಂತೆ ತುಟಿಗಳನ್ನು ಪಿಚಕಿ ತೋಳುಗಳನ್ನು ಕುಲುಕಿದೆ.

"ನೀನು ಯಾವ ಊರಿನವನು?" ಎಂದು ಮತ್ತೆ ಅಪ್ಪ ಮಾತನ್ನು ಮುಂದುವರೆಸಿದರು.

"ಪಿಚ್ಚೆರಿ ಪಕ್ಕ ವಿಲ್ಲಿನೂರು. ಸುಬ್ಬಯ್ಯ ಕೌಂಡರ್ ಅಂತ ಒಬ್ರು ಯಜಮಾನಿದ್ರು. ಅವರ ದೊಡ್ಡಿಯಲ್ಲೇ ಕೆಲಸ ಮಾಡ್ದೆ. ತೊಟ್ಟಿ ಮಾಡೋದು, ದನಗಳನ್ನ ನೋಡ್ಕೋಳ್ಳೋದು ಕೆಲ್ಸ. ಚಿಕ್ಕ ಹುಡುಗನಾಗಿದ್ದಾಗಿಂದ ಅಲ್ಲೇ ಇದ್ದೆ."

"ಗೊತ್ತು ಹೇಳು. ನಮ್ಮ ದೊಡ್ಡಮ್ಮನ ನಾದಿನಿ ಕಡೆಯಿಂದ ದೂರದ ಸಂಬಂಧ ನಮಗೆ. ಅವರು ತೀರ್ಕೊಂಡು ಮೂರು ವರ್ಷ ಇರಬಹುದಲ್ಲ..."